# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಹಾಗು ವಿಶೇಷ ನ್ಯಾಯಾಲಯ. ಹಾವೇರಿ
## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ಸಿ/ಎಸ್.ಟಿ.62/2025

**ಪಿರ್ಯಾದಿಃ** ಹಾವೇರಿ ಡಿ.ಸಿ.ಆರ್.ಇ ಪೊಲೀಸ್ ಠಾಣೆ

**-ವಿರುದ್ಧ-**

**ಆರೋಪಿತರುಃ**

1. ಜಮೀರ ಮಕ್ಬುದ್ ಅಲಿ ನದಾಫ್
   ವಯಸ್ಸುಃ 25 ವರ್ಷ,
   ಸಾಃ ಚಿಕ್ಕಲಿಂಗದಹಳ್ಳಿ ತಾಃ ಹಾವೇರಿ
2. ನವೀದ್ ಅಲಿ ರಿತ್ತಿ
   ವಯಸ್ಸುಃ 23 ವರ್ಷ,
   ಸಾಃಬಿಂಗಾಪುರ ತಾಃ ಹಾನಗಲ್
3. ಅಭಿಷೇಕ ಫಕ್ಕೀರೇಶ ಕಾಳೆ
   ವಯಸ್ಸುಃ 20 ವರ್ಷ,
   ಸಾಃ ಕಬ್ಬೂರು ತಾಃ ಹಾವೇರಿ

## ದೋಷಾರೋಪಣೆ

ಶ್ರೀ ಎನ್.ಎಂ. ರಮೇಶ, ಬಿ.ಕಾಂ. ಎಲ್.ಎಲ್.ಬಿ., ಎಲ್.ಎಲ್.ಎಂ. ಹಾವೇರಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಂಬ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಹೊರಿಸುವ ದೋಷಾರೋಪಣೆಗಳೇನೆಂದರೆ,

1. ದಿನಾಂಕಃ04.10.2025 ರಂದು ರಾತ್ರಿ 11.00 ಗಂಟೆ ಸುಮಾರಿಗೆ 1 ಮತ್ತು 2 ನೇ ಆರೋಪಿತರಾದ ನೀವು 3 ನೇ ಆರೋಪಿತನೊಂದಿಗೆ ಸೇರಿಕೊಂಡು ಚಿಕ್ಕಲಿಂಗದಹಳ್ಳಿ ಗ್ರಾಮದ

ಬಸ್ ನಿಲ್ದಾಣದ ಎದುರಿಗೆ ಇರುವ ಹಾವೇರಿ–ಕಾಗಿನೆಲೆ ರಸ್ತೆಯ ಪೂರ್ವದ ಕಡೆಗೆ ಇರುವ ಸಾರ್ವಜನಿಕ ರಸ್ತೆಯ ಮೇಲೆ ಚಾಸಾ–4–ಬಸವರಾಜ ಸವೂರು ಇವರಿಗೆ 1 ಮತ್ತು 2 ನೇ ಆರೋಪಿತರಾದ ನೀವು ನಾವು ಜೈಲಿನಲ್ಲಿದ್ದಾಗ ನಮಗೆ ಬಿಡಿಸಿಕೊಂಡು ಬರಲು ಆಗಲಿಲ್ಲೇನು ಎಂದು ಆತನೊಂದಿಗೆ ಜಗಳ ತೆಗೆದು ಆರೋಪಿತರಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ–4 ರವರಿಗೆ ಕೈಯಿಂದ ಮೈ ಕೈಗೆ ಹೊಡಿ–ಬಡಿ ಮಾಡಿ ಗಾಯಗೊಳಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ–2023 ಕಲಂ 115(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

2. ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ–4 ರವರೊಂದಿಗೆ ಜಗಳ ತೆಗೆದು, 1 ಮತ್ತು 3 ನೇ ಆರೋಪಿತರಾದ ನೀವು ಕಲ್ಲುಗಳಿಂದ ಚಾಸಾ–4 ರವರ ಹಣೆಗೆ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ –2023 ಕಲಂ 118(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

3. ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ–4 ರವರೊಂದಿಗೆ ಜಗಳ ತೆಗೆದು ಸೂಳೇ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿ ಅವಮಾನ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ–2023 ಕಲಂ 352 ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

4. ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು ಸೂಳೇ ಮಗನಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿ ಹೊಡಿ-ಬಡಿ ಮಾಡಿ, ಇನ್ನೊಂದು ಸಾರಿ ಸಿಗು ನಿನ್ನನ್ನು ಜೀವಂತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ-2023 ಕಲಂ 351(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

5. ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಮುಸ್ಲಿಂ ಜಾತಿಗೆ ಸೇರಿದ್ದು, ಚಾಸಾ-4-ಬಸವರಾಜ ಸವೂರು ಇವರು ಇವರು ಹಿಂದೂ ನಾಯಕ ಪರಿಶಿಷ್ಟ ಪಂಗಡ ಜಾತಿಗೆ ಸೇರಿದವರು ಎಂದು ಗೊತ್ತಿದ್ದರೂ ಸಹ ಆರೋಪಿತರಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-4 ರವರೊಂದಿಗೆ ಜಗಳ ತೆಗೆದು ಸಾರ್ವಜನಿಕವಾಗಿ ಕೀಳು ವಾಲ್ಮೀಕಿ ಜಾತಿ ಸೂಳೇ ಮಗನೇ ಅಂತಾ ಜಾತಿ ಎತ್ತಿ ಬೈದಾಡಿ ಜಾತಿ ನಿಂದನೆ ಮಾಡಿ ಪರಿಶಿಷ್ಟ ಪಂಗಡ ಜಾತಿಗೆ ಅವಮಾನಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಎಸ್.ಸಿ/ಎಸ್.ಟಿ (POA) ಕಲಂ.3(1)(r) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಣೆಗಳಿಗಾಗಿ ಹಾವೇರಿ ವಿಶೇಷ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನಿಮ್ಮ ಮೇಲೆ ಮೊಕದ್ದಮೆ ನಡೆಯತಕ್ಕದ್ದು ಅಂತಾ ಆದೇಶಿಸಿದ್ದೇನೆ.

ದಿನಾಂಕಃ18.02.2026
ಹಾವೇರಿ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು